ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 1-7
©*IIMRD*, Mysuru

IIMRD JOURNALS
www.iimrd.com

# ಶಿವಶರಣೆಯರ ವಚನಗಳಲ್ಲಿ ಕಾಯಕ ಪ್ರಜ್ಞೆ: ಬಹುಮುಖಿ ನೆಲೆ

**ಡಾ. ಬೋಜಮ್ಮ ಕೆ.ಎಸ್.***

*ಸಹಾಯಕ ಪ್ರಾಧ್ಯಾಪಕರು, ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜು, ಉಜಿರೆ.

***ಸಾರಾಂಶ (Abstract)***

*ಕನ್ನಡನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನವು ಒಂದು ಮಹತ್ವದ ಅಧ್ಯಾಯವಾಗಿದೆ. , ಸಕಲ ಜೀವಾತ್ಮರಿಗೆ ಲೇಸು ಬಯಸುವ, ಬಡವ ಬಲ್ಲಿದರ ಭೇದವನ್ನು ತೊಡೆದು ಹಾಕುವ, ಸ್ತ್ರೀ–ಪುರುಷರ ಅಸಮಾನತೆಯನ್ನು ನಿವಾರಿಸುವ ಅದ್ಭುತವಾದ ಕಾರ್ಯವನ್ನು ಮಾಡಿದ್ದು ಇಂದಿಗೂ ಆದರ್ಶವಾಗಿ ಉಳಿದಿದೆ. ವಚನ ಕಾಯಕದಲ್ಲಿ ಅಕ್ಕಮಹಾದೇವಿ, ಮೋಳಿಗೆ ಮಹಾದೇವಿಯಮ್ಮ, ಅಯ್ದಕ್ಕಿ ಲಕ್ಕಮ್ಮ, ನೀಲಮ್ಮ, ಕಾಳವ್ವೆ, ಸತ್ಯಕ್ಕ ಮುಂತಾದ ಶಿವಶರಣೆಯರು ಮುಖ್ಯರಾಗುತ್ತಾರೆ. ಪ್ರಸ್ತುತ ಲೇಖನದಲ್ಲಿ ಈ ಶಿವಶರಣೆಯರ ವಚನಗಳಲ್ಲಿ ಅಡಕವಾಗಿರುವ ಕಾಯಕ ಪ್ರಜ್ಞೆಯ ಬಹುಮುಖಿ ನೆಲೆಯನ್ನು ವಿಮರ್ಶಿಸಲಾಗಿದೆ.*

***ಮುಖ್ಯ ಪದಗಳು (Keywords) :*** ಬಸವಣ್ಣ, ಶಿವಶರಣೆಯರು, ಸಮಾನತೆ, ವಚನಗಳು, ಕಾಯಕ.

**ಪೀಠಿಕೆ**

ಕನ್ನಡನಾಡಿನ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನವು ಒಂದು ಮಹತ್ವದ ಅಧ್ಯಾಯವಾಗಿದೆ. ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅಭೂತಪೂರ್ವ ಬದಲಾವಣೆ ಮಾಡಿದ ಕಾಲವದು. ಆಧ್ಯಾತ್ಮಿಕವಾಗಿಯೂ ವೈಶಿಷ್ಟ್ಯಪೂರ್ಣವಾದ ಸಾಧನೆ ಮಾಡಿದ ಕಾಲವದು. ಸಮಾಜದಲ್ಲಿ ಎಲ್ಲಾ ಸ್ತರದವರನ್ನೂ ಸಮಾನತೆಯಿಂದ ಕಾಣುವ ಹೊಸ ದೃಷ್ಟಿಕೋನವನ್ನು ತಂದು ಕೊಟ್ಟ ಬಸವಣ್ಣನವರು, ಅತ್ಯಂತ ಪ್ರಗತಿಪರ ವಿಚಾರವಾದಿಗಳಾಗಿದ್ದರು. ಧಾರ್ಮಿಕ, ಸಾಮಾಜಿಕ ಹಾಗೂ ಕಾಯಕ ನಿಷ್ಠವಾದ ಆರ್ಥಿಕ ಪರಿವರ್ತನೆಯನ್ನು ಬಯಸಿದ ಅವರು ಸಾಹಿತ್ಯಿಕವಾಗಿಯೂ ನೂತನವಾದ ಮಾರ್ಗವೊಂದನ್ನು ತುಳಿದರು. ಬಸವಣ್ಣನವರ ವಿಶಾಲ ಧೋರಣೆಯಿಂದಾಗಿ ಸಾಹಿತ್ಯ ಕ್ಷೇತ್ರದಿಂದ ದೂರವಾಗಿದ್ದ ಸ್ತ್ರೀಯರು ಮತ್ತು ದಲಿತರನ್ನು ಸಾಹಿತ್ಯ ಸೃಷ್ಟಿ ಮಾಡುವಂತೆ ಪ್ರೇರೆಪಿಸಿದ್ದು ಈ ಕಾಲ ಘಟ್ಟದಲ್ಲಿಯೇ. ಮಹಿಳೆಯರನ್ನು ಕೀಳಾಗಿ ಕಾಣುತ್ತಿದ್ದ ಸಮಾಜದಲ್ಲಿ ಬಸವಣ್ಣನವರು ಮಹಿಳೆಯರಿಗೆ ಲಿಂಗದೀಕ್ಷೆಯನ್ನು ಕೊಟ್ಟರು. ಆಧ್ಯಾತ್ಮಿಕವಾಗಿ ಪುರುಷನಷ್ಟೇ ಉನ್ನತ ನಿಲುವಿಗೆ ಏರಬಲ್ಲರು ಎಂಬುದನ್ನು ಧೃಡಪಡಿಸಿದರು. ವಚನಕಾರರು ಮೊದಲಬಾರಿಗೆ ಹೆಣ್ಣು ಗಂಡುಗಳಲ್ಲಿ ಭೇದವನ್ನು ತಿರಸ್ಕರಿಸಿದರು. ಧಾರ್ಮಿಕ ಸ್ವಾತಂತ್ರ್ಯಕ್ಕೆ ಅರ್ಥಕೊಡುವ ಆರ್ಥಿಕ ಸ್ವಾತಂತ್ರ್ಯವನ್ನು, ಸಾಮಾಜಿಕ ಸಮಾನತೆಯನ್ನು, ಸ್ತ್ರೀಯರ ವಿಮೋಚನೆಯನ್ನು ಬಸವಣ್ಣ ತನ್ನ ಹೋರಾಟದ ಭಾಗವಾಗಿಸಿಕೊಂಡಿದ್ದರು. ಮಹಿಳೆಯರ ಶೋಷಣೆ ಮನುಷ್ಯನ ಆಸ್ತಿತ್ವಕ್ಕೆ ಸವಾಲೊಡ್ಡಿ ನಿಂತಿದ್ದ

ಸಂದರ್ಭದಲ್ಲಿ ಸಮಾಜದ ಎಲ್ಲಾ ಮೌಲ್ಯಗಳನ್ನು ಅಪಮೌಲ್ಯಗೊಳಿಸಿ ಮಾನವ ಘನತೆಯನ್ನು ಎತ್ತಿ ಹಿಡಿಯುವ ಮೌಲ್ಯಗಳಿಗೆ ಚಾಲನೆ ತುಂಬಿದರು. ಬಸವಣ್ಣನವರು ಕೇವಲ ಶರಣರಲ್ಲ, ದಾರ್ಶನಿಕರಲ್ಲ, ಮಹಾ ಮಾನವತಾವಾದಿಗಳು.

ಬಸವಣ್ಣನವರು ಮಹಿಳಾ ಸ್ವಾತಂತ್ರ್ಯಕ್ಕೆ ಆಧ್ಯಾತ್ಮಿಕ ಔನತ್ಯವನ್ನು ತಂದುಕೊಟ್ಟು 'ಅನುಭವ ಮಂಟಪ'ದಲ್ಲಿ ಮಹಿಳೆಯರಿಗೆ ಪ್ರವೇಶ ಕಲ್ಪಿಸಿದರು. ಸ್ತ್ರೀಯರಿಗೆ ಕಾಯಕ ಮಾಡುವ ಅವಕಾಶ ಕಲ್ಪಿಸಿಕೊಟ್ಟರು. ಭವಿಯಾದ ಹೆಣ್ಣು ಭಕ್ತಳಾಗುವ ಎಲ್ಲಾ ಅವಕಾಶವನ್ನು ಮುಕ್ತವಾಗಿಸಿದರು. ಅರ್ಥ ವ್ಯವಸ್ಥೆಯಿಂದ ಹೆಣ್ಣಿಗೆ ಸಮಾನತೆ, ಸ್ವಾತಂತ್ರ್ಯ ದೊರೆತರೆ ಅದು ಸಾಂಸ್ಕೃತಿಕ, ಸಾಮಾಜಿಕ ಸ್ಥಿತ್ಯಂತರಕ್ಕೆ ಕಾರಣವಾಗಬಲ್ಲದು ಎಂಬ ಸ್ಪಷ್ಟ ನಂಬಿಕೆ ಬಸವಣ್ಣನವರಿಗಿತ್ತು. ಆ ಕಾರಣಕ್ಕಾಗಿಯೇ ಕಾಯಕ ಮತ್ತು ದಾಸೋಹ ಸಿದ್ಧಾಂತವನ್ನು ಪ್ರತಿಪಾದಿಸಿದರು. ವಚನ ಕಾಯಕದಲ್ಲಿ ಅಕ್ಕಮಹಾದೇವಿ, ಮೋಳಿಗೆ ಮಹಾದೇವಿಯಮ್ಮ, ಅಯ್ದಕ್ಕಿ ಲಕ್ಕಮ್ಮ, ನೀಲಮ್ಮ, ಕಾಳವ್ವೆ, ಸತ್ಯಕ್ಕ ಮುಖ್ಯರಾಗುತ್ತಾರೆ.

ಹನ್ನೆರಡನೇ ಶತಮಾನದಲ್ಲಿದ್ದ ಸತ್ಯಕ್ಕ ಶಿವಶರಣೆ. ಬೀದಿಗುಡಿಸುವ ಕಾಯಕ ಮಾಡುತ್ತಿದ್ದಳು. ತನ್ನ ಕಾಯಕದ ಬಗ್ಗೆ ಅತೀವ ನಿಷ್ಠೆ, ಶ್ರದ್ಧೆ ಹೊಂದಿದವಳು. ತನ್ನ ಕಾಯಕದ ಬಗ್ಗೆ ಅಪಾರ ಅಭಿಮಾನ ಹೊಂದಿದವಳು. ತಾನು ಮಾಡುತ್ತಿರುವ ಕಾಯಕ ಸತ್ಯ ಶುದ್ಧ ಕಾಯಕವೆಂದು ಅವಳು ಭಾವಿಸಿದ್ದಳು. ಹಾಗೆಯೇ ಬದುಕಿದ್ದಳು. ಕಾಯಕ ಪ್ರೀತಿ, ಅನ್ಯರ ವಸ್ತು ಸ್ವೀಕರಣೆಯ ನಿರಾಕರಣೆ, ಸದ್ಯದ ಬದುಕಿನ ಬದ್ಧತೆ, ಇಟ್ಟಂತೆ ಇರುವೆ ಎಂಬ ಛಲ, ಆತ್ಮವಿಶ್ವಾಸ, ಪ್ರಾಮಾಣಿಕತೆ, ಅರಿವಿನ ಹಿರಿತನ, ಧೈರ್ಯಗಳನ್ನೊಳಗೊಂಡ ವೈಚಾರಿಕ ನೆಲೆ ಇವಳ ವಚನಗಳ ವಿಶೇಷವಾಗಿದೆ. ಅವಳ ಒಂದು ವಚನ ಹೀಗಿದೆ.

***ಲಂಚ ವಂಚನಕೆ ಕೈಯಾನದ ಭಾಷೆ!***
***ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದರೆ***
***ನಾನು ಕೈ ಮುಟ್ಟಿ ಎತ್ತಿದನಾದರೆ***
***ನಿಮ್ಮಾಣೆ ನಿಮ್ಮ ಪ್ರಮಥರಾಣೆ***

ಅತ್ಯಂತ ಬಡ ಕುಡುಂಬದಿಂದ ಬಂದಿದ್ದರೂ, ಅರ್ಥಿಕವಾಗಿ ಸಂಕಷ್ಟದಲ್ಲಿದ್ದರೂ ನೈತಿಕತೆಯೇ ಎಲ್ಲೆಯನ್ನು ಮೀರಲಾರೆ ಎಂಬ ಅಕೆಯ ಧ್ವನಿ ಈ ವಚನದಲ್ಲಿ ಒಡಮೂಡಿದೆ. ದುಡಿಮೆಗೆ ಸರಿಯಾದ ಕೂಲಿ ದೊರಕದಿದ್ದರೂ ಸಾಮಾಜಿಕ ಗೌರವದ ಹಾದಿಯನ್ನು ಬಿಟ್ಟು ದುರಾಸೆಯ ದುರ್ಮಾರ್ಗದಲ್ಲಿ ನಡೆಯುದಿಲ್ಲವೆಂಬ ಆಕೆಯ ನುಡಿ ಅವಳ ಸ್ವಾಭಿಮಾನದ ಪ್ರತೀಕ. 'ಲಂಚ ವಂಚನಕ್ಕೆ ಕೈಯಾನದ ಭಾಷೆ' ಎನ್ನುತ್ತಾಳೆ ಸತ್ಯಕ್ಕೆ. ಅವಳು ನಂಬಿದ್ದು ಶರಣಧರ್ಮವನ್ನು. ಸಹಜವಾಗಿ ಅವಳಿಗೆ ಕಾಯಕವೇ ಕೈಲಾಸ: ಕಾಯಕದಲ್ಲಿ ಸತ್ಯಶುದ್ಧ ಭಾವವಿರಲೇಬೇಕು ಎಂಬುದಕ್ಕೆ ಸತ್ಯಕ್ಕ ಒಂದು ಉದಾಹರಣೆ.

ಮತ್ತೊಬ್ಬ ಶಿವಶರಣೆ ಅಯ್ದಕ್ಕಿ ಲಕ್ಕಮ್ಮ ಇವಳ ಗಂಡ ಶರಣಮಾರಯ್ಯ ಕಲ್ಯಾಣದ ಶರಣದ ಬೀದಿಯಲ್ಲಿ ಮಹಾಮನೆಯ ದಾಸೋಹದ ಅಂಗಳದಲ್ಲಿ ಚೆಲ್ಲಿದ್ದ ಅಕ್ಕಿಯನ್ನು ಅಯ್ದು ತಂದು, ತನ್ನ ಹೆಂಡತಿಗೆ ಒಪ್ಪಿಸುವುದು. ಅವಳು ಅದನ್ನು ಬಳಸಿ ಅಡುಗೆ ಮಾಡಿ ಶರಣರಿಗೆ ದಾಸೋಹ ನೀಡಿ ನಂತರ ತಾವು ಪ್ರಸಾದವಾಗಿ ಸೇವಿಸುವುದು ಅಯ್ದಕ್ಕಿ ಲಕ್ಕಮ್ಮಳ ನಿತ್ಯದ ಕಾಯಕ.

*ಅರಿವರತ ಅರುವೆಯ ಅಂಗದಲ್ಲಿ ಕಟ್ಟಿ*
*ಬಯಕೆಯರತ ಕೈಯಲ್ಲಿ ತಂಡುಲವನಾಯ್ದುಕೊಂಡು*
*ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ ಕೊಂಡು ಬಾರಯ್ಯ*

ಎಂದು ತನ್ನ ಗಂಡನಿಗೆ ಬಿನ್ನವಿಸುತ್ತಾಳೆ. ಆಕೆಯ ಸತ್ಯ ನಿಷ್ಠೆಗೆ ಭಂಗ ಉಂಟಾದುದು ಆಕೆಯ ಗಂಡ ಮಾರಯ್ಯ ಅತಿ ಮೋಹಕ್ಕೊಳಗಾಗಿ ಅಗತ್ಯಕ್ಕಿಂತ ಅಕ್ಕಿಯನ್ನು ಸಂಗ್ರಹಿಸಿದ ಸಂದರ್ಭದಲ್ಲಿ, ತನ್ನ ಗಂಡನು ಸಂಗ್ರಹಿಸಿದ ಅನೈತಿಕ ಅಕ್ಕಿಯ ಸಂಪತ್ತನ್ನು ಗಮನಿಸಿದ ಲಕ್ಕಮ್ಮ ಅದಕ್ಕೆ ಹೀಗೆ ಪ್ರತಿಕ್ರಿಯೆಯನ್ನು ನೀಡುತ್ತಾಳೆ.

*ಆಸೆಯೆಂಬುದು ಅರಸಿಂಗಲ್ಲದೆ*
*ಶಿವಭಕ್ತರಿಗುಂಟೇ ಅಯ್ಯಾ?*
*ರೋಷವೆಂಬುದು ಯಮದೂತರಿಗಲ್ಲದೆ*
*ಅಜಾತರಿಗುಂಟೆ ಅಯ್ಯಾ?*
*ಈಸಕ್ಕಿಯಾಸೆ ನಮಗೇಕೆ? ವರನೊಪ್ಪ*
*ಮಾರಯ್ಯ ಪ್ರಿಯ  ಅಮರೇಶ್ವರ ಲಿಂಗಕ್ಕೆ ದೂರಮಾರಯ್ಯಾ*

ಸತ್ಯ ಶುದ್ಧ ಕಾಯಕ ಮಾಡಿ ಸಂಪಾದನೆ ಮಾಡಿದರೆ ಮಾತ್ರ ಅದಕ್ಕೆ ಸಮಾಜದಲ್ಲಿ ಗೌರವ ಅದರ ಹೊರತು ಅನೈತಿಕ ದಾರಿಯಲ್ಲಿ ಗಳಿಸಿದ ಸಂಪಾದನೆಯನ್ನು ಆಕೆ ಈ ವಚನದಲ್ಲಿ ತಿರಸ್ಕರಿಸುತ್ತಾಳೆ.

ವೃತ್ತಿಯಲ್ಲಿ ಸೂಳೆಯಾಗಿದ್ದ ಸಂಕವ್ವೆ ಶರಣ ಚಳುವಳಿಯ ನೇರ ಪ್ರಭಾವಕ್ಕೆ ಒಳಗಾಗಿ ತನ್ನ ವೃತ್ತಿಯಿಂದ ಹೊರಬಂದು ಸುವಿಚಾರಗಳನ್ನು ಅಳವಡಿಸಿಕೊಂಡು ಒಳ್ಳೆಯ ದಾರಿ ಹಿಡಿದಿದ್ದಳು. ಬದುಕಿನಲ್ಲಿ ಸ್ವಾಭಿಮಾನ ಕಾಯಕ ನಿಷ್ಠೆಗಳನ್ನು ಬೆಳೆಸಿಕೊಂಡು, ಪ್ರಾಮಾಣಿಕವಾಗಿ ಬದುಕಲು ಯತ್ನಿಸಿದ ವಚನಕಾರ್ತಿ. ತನ್ನ ವಚನದಲ್ಲಿ ತನ್ನ ವೃತ್ತಿಯ ಪ್ರತಿಭೆಯನ್ನಿಟ್ಟುಕೊಂಡೇ ಯಾವ ಅಂಜಿಕೆ ಆತ್ಮ ವಂಚನೆಯಿಲ್ಲದೆ ಸಹಜವಾಗಿ ತನ್ನ ಭಾವನೆಯನ್ನು ಪ್ರಕಟಿಸಿದ ರೀತಿ ಅತ್ಯಂತ ಗಮನಾರ್ಹವಾದದ್ದು. ವ್ರತನಿಷ್ಠೆ, ಏಕದೈವನಿಷ್ಠೆ ಮತ್ತು ತತ್ವಬದ್ಧತೆ  ಸಂಕವ್ವೆಯ ವ್ಯಕ್ತಿತ್ವದ ಗುಣ ವಿಶೇಷಗಳಾಗಿವೆ. ನಿರ್ಲಜ್ಜೇಶ್ವರ ಅಂಕಿತವು ಆಕೆಯ ವೃತ್ತಿ ಸಂಬಂಧಿತ ವಿಶಿಷ್ಟ ಮನೋಧರ್ಮವನ್ನು ಸೂಚಿಸುವುದರೊಂದಿಗೆ ಪ್ರಧಾನ ಸಂಸ್ಕೃತಿಯ ಸ್ತ್ರೀ ಮಾದರಿಗೆ ವ್ಯತಿರಿಕ್ತವಾದ ಹೊಸ ಪ್ರತೀಕದ ಹುಡುಕಾಟವಾಗಿ ಕಂಡುಬರುತ್ತದೆ. ಲಜ್ಜೆ ನಾಚಿಕೆಯ ನೆಪದಲ್ಲಿ ಅಭಿವ್ಯಕ್ತಿಯನ್ನು ಕಳೆದುಕೊಂಡಿದ್ದ ಸ್ತ್ರೀ ವರ್ಗದಲ್ಲಿ ಮೂಡಿದ ವೈಚಾರಿಕ ಎಚ್ಚರಕ್ಕೆ ಮಾದರಿಯಾಗಿದ್ದಾಳೆ. ವೃತ್ತಿ ಸಂಬಂಧಿತ ಅವಮಾನ ಮುಜುಗರಗಳನ್ನು ಮುರಿದು ತನ್ನ ಸ್ವಂತಿಕೆ, ಸ್ವ–ಅಭಿವ್ಯಕ್ತಿಯನ್ನು ರೂಢಿಸಿಕೊಂಡಿದ್ದಕ್ಕೆ ಆಕೆಯ ವಚನ ಉದಾಹರಣೆಯಾಗಿದೆ. ವೃತ್ತಿಯ ಅನುಭವದ ಮೂಲಕ ಧರ್ಮಶ್ರದ್ಧೆ ಆಚಾರಗಳನ್ನು ಅರ್ಥೈಸಿಕೊಂಡಿರುವುದನ್ನು ಕೆಳಗಿನ ವಚನದಲ್ಲಿ ಗುರುತಿಸಬಹುದು.

*ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ,*
*ಹೆಡಿದಡೆ ಬತ್ತಲೆ ನಿಲ್ಲಿಸಿ ಕೊಲ್ಲುವರಯ್ಯ*
*ವ್ರತಹೀನನರಿದು ಬೆರೆದಡೆ ಕಾದ ಕತ್ತಿಯಲ್ಲಿ ಕೈ, ಕಿವಿ, ಮೂಗು ಗೊಯ್ವರಯ್ಯ*
*ಬಲ್ಲೆ, ನೊಲ್ಲೆ, ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ*

ಏಕದೇವೋಪಾಸನೆಯು ಈ ವಚನದ ವಸ್ತುವಾಗಿದೆ. ನಿಜವಾದ ಭಕ್ತನು ಶಿವನೊಬ್ಬನನ್ನೇ ನಂಬಬೇಕು. ಲಿಂಗದೀಕ್ಷೆಯ ಮೂಲಕ ಶಿವನ ಭಕ್ತರಾದ ಮೇಲೆ ಅನ್ಯದೈವಕ್ಕೆ ಇಲ್ಲಿ ಅವಕಾಶವಿಲ್ಲ. ತನ್ನದೇ ಆದ

ಶೈಲಿಯಲ್ಲಿ ಸಂಕವ್ವೆಯು ಶಿವನಲ್ಲಿ ಭಕ್ತರ ನಿಷ್ಠೆಯನ್ನು ಒತ್ತಿಹೇಳುವುದರ ಜೊತೆಗೆ ಆಕೆಯು ತನ್ನ ವೃತ್ತಿ ಜೀವನದ ನೈತಿಕತೆಯನ್ನು ವಿವರಿಸಿದ್ದಾಳೆ. ಇಲ್ಲಿ ವ್ರತಹೀನರ ಸಂಗವನ್ನು ಮಾಡುವುದು ಅಪರಾಧ ಎನ್ನುವುದನ್ನು ತನ್ನ ವೃತ್ತಿಯ ಅನುಭವದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿರುವುದು ವಚನಕಾರ್ತಿಯೋರ್ವಳ ಪ್ರಾಮಾಣಿಕತೆಯನ್ನು ದೃಢಪಡಿಸುತ್ತದೆ. ವಚನಕಾರರು ಬರೆದಂತೆ ಬದುಕಿದರು ಎನ್ನುವುದಕ್ಕೆ ಇಂತಹ ವಚನಕಾರ್ತಿಯರು ಉದಾಹರಣೆಯಾಗುತ್ತಾರೆ.

ಶಿವಶರಣೆ ಅಕ್ಕಮ್ಮ ಕೂಡ ಸೂಳೆ ಸಂಕವ್ವೆಯಂತೆ ಕಾಯಕನಿರತ ಹೆಣ್ಣು. ತನ್ನ ಕಾಯಕಕ್ಕೆ ಸಂಬಂಧಿಸಿದಂತೆ ಅವಳದೇ ಆದ ವ್ರತ ನೇಮ ನಿಯಮಗಳ ಕಟ್ಟಳೆ ಹಾಕಿಕೊಂಡಿದ್ದಾಳೆ. ಹೆಣ್ಣಿನ ಮೇಲೆ ನಡೆಯುತ್ತಿದ್ದ ದೌರ್ಜನ್ಯ ದಬ್ಬಾಳಿಕೆಯ ವಿರುದ್ಧ ದನಿ ಎತ್ತುವುದಕ್ಕೆ ಅವಳಿಗೆ ಕಾಯಕ ಪ್ರಜ್ಞೆ ಒಂದು ಎಚ್ಚರವಾಗಿ ಒದಗಿ ಬಂದಿದೆ. ಆಚಾರವೆಂಬುದು ವಿಚಾರವನ್ನು ಒಳಗೊಂಡಿದ್ದು, ವಿಚಾರವಿಲ್ಲದೆ ಆಚಾರವಿಲ್ಲ. ಆದರೆ ಆಚಾರವಿಲ್ಲದೆ ವಿಚಾರವಿರಬಹುದು, ವಿಚಾರವನ್ನು ಹೇಳದೆ ಆಚಾರದಲ್ಲಿ ವಿಚಾರಗಳನ್ನು ಅನುಷ್ಠಾನಗೊಳಿಸಿದವಳು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಭೋಗದ ವಸ್ತುವಾಗಿ ಕಾಣುವ, ಬಳಸುವ ಸ್ಥಿತಿ ಇಂದು ನಿನ್ನೆಯದಲ್ಲ. ಧರ್ಮದ ಆವರಣದಲ್ಲೂ ಹೆಣ್ಣನ್ನು ಭೋಗದ ಸರಕಾಗಿ ಬಳಸಿದ್ದು ಇದೆ. ಆದರೆ ಇಂಥ ವಚನಕಾರ್ತಿಯರು ವೃತ್ತಿಯ ಜೊತೆಗೆ ಕಲೆಯನ್ನು ಸಂಗತಗೊಳಿಸಿಕೊಂಡಿದ್ದು ವಿಶೇಷ. ಆದರೆ ಅದಕ್ಕೆ ಧಾರ್ಮಿಕ ವಿಧಿವಿಧಾನಗಳ ಒಪ್ಪಿತ ಮುದ್ರೆ ನೀಡಿದ್ದು ಅದನ್ನೊಂದು ವ್ಯವಸ್ಥೆಯಾಗಿ ಬೆಳೆಸಿ ಅನಂತರದಲ್ಲಿ ಅದೊಂದು ವೃತ್ತಿಯಾಗುತ್ತಲೇ ಕಾಲಾಂತರದಲ್ಲಿ ಅಪಮಾನಿತ ಜಾತಿಯಾಗಿ ಉಳಿಯಿತು. ಇಂಥ ವೃತ್ತಿ ಮೂಲಕ್ಕೆ ಸೇರಿದವರು ಅಕ್ಕಮ್ಮ. ತಾನು ಮಾಡುತ್ತಿದ್ದ ವೃತ್ತಿಧರ್ಮಕ್ಕೆ ಕಾಯಕದ ಮಹತ್ತವನ್ನು, ಘನತೆಯನ್ನು ತಂದುಕೊಳ್ಳಲು ಕೆಲವು ಕಟ್ಟುಪಾಡುಗಳನ್ನು ಹಾಕಿಕೊಳ್ಳುತ್ತಾರೆ. ಆ ಕಟ್ಟುಪಾಡು ಶರಣತತ್ವದ ನೇಮನಿಷ್ಠೆಯನ್ನು ಒಳಗೊಂಡಿರುವ ವಿಧಿಗಳು. ಸಾಮಾಜಿಕವಾಗಿ ಇರುವ ವೃತ್ತಿಯ ಬಗೆಗಿನ ತಿರಸ್ಕಾರದಿಂದ ಮುಕ್ತಳಾಗಲು ಭಾವದಲ್ಲಿ ಪರಿಗಣಿಸದೆ ಆಯ್ಕೆಯ ಅಧಿಕಾರವನ್ನು ವ್ರತನಿಷ್ಠೆಯ ನೆಲೆಯಲ್ಲಿ ಪಡೆದುಕೊಳ್ಳುತ್ತಾಳೆ ಎಂಬುದಕ್ಕೆ ಈ ವಚನವನ್ನು ಗಮನಿಸಬಹುದು.

***'ಎನ್ನ ಸಮಗ್ರಾಹಕ ಶೀಲ ಸಂಪಾದಕನಲ್ಲದೆ***
***ಎನ್ನ ಕಣ್ಣಿನಲ್ಲಿ ನೋಡೆ ಜಿಹ್ವೆಯಲ್ಲಿ ನೆನೆಯ***
***ಮಿಕ್ಕಾದ ತಟ್ಟುವ ಮುಟ್ಟುವ ತಾಗುವ ಸೋಕುವ***
***ನಾನಾ ಗುಣಂಗಳಲ್ಲಿ ಶೋಧಿಸಿಯಲ್ಲದೆ ಬೆರೆಯೆ***
***ಕೊಂಬಲ್ಲಿ ಕೊಡುವಲ್ಲಿ***
***ಎನ್ನ ವ್ರತಚಾರವ ಅಂಗೀಕರಿಸಿದವರಲ್ಲಿಗಲ್ಲದೆ ಹೋಗೆ'***

ಇಲ್ಲಿ ಅಕ್ಕಮ್ಮ ಕಾಯಕ ಪ್ರಜ್ಞೆಯಲ್ಲಿ ವೇಶ್ಯಾವೃತ್ತಿಯನ್ನು ಸ್ವೀಕರಿಸಿದ್ದರೂ ಧಾರ್ಮಿಕ ಆಚಾರವಾಗಿ ವಿಶೇಷ ಕಟ್ಟುಪಾಡುಗಳನ್ನು ಹಾಕಿಕೊಂಡಿದ್ದಾಳೆ.

***ಮತ್ತವರ ಸಂಗವ ಮಾಡಿದೆನಾದಡೆ***
***ಲಿಂಗಕ್ಕೆ ಸಲ್ಲ, ಜಂಗಮಕ್ಕೆ ದೂರ, ಪ್ರಸಾದವಿಲ್ಲ***
***ಆಚಾರವೆ ಪ್ರಾಣವಾದ ರಾಮೆಶ್ವರಲಿಂಗವಾದರೂ***

*ವ್ರತಭ್ರಷ್ಟನೆಂದು ಬಿಡುವೆ*
*ತಾ ವ್ರತಿಯಾಗಿ ಮಕ್ಕಳೆಂದು ಮಾಡದಿರ್ದಡೆ ಆ ವ್ರತಕ್ಕೆ ತಾನೆ ಹೊರಗು.*
*ತನ್ನಂಗ ಮನ ಭಾವ ಕರಣಂಗಳಲ್ಲಿ ಸಂಗದಲ್ಲಿ ಇದ್ದವರಿಗೆಲ್ಲಕ್ಕೂ*
*ತನ್ನಂಗದ ವ್ರತದ ಮಾಡಬೇಕು.*
*ಇದು ಸೀಮೆವಂತರಯುಕ್ತಿ*
*ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಾಚಾರದ ಸೊತ್ತು*

ಈ ವಚನಗಳು ನೇರವಾಗಿ ಅಕ್ಕಮ್ಮನ ಕಾಯಕದ ವಿಚಾರವನ್ನು ಹೇಳುತ್ತಿವೆ. ಅವಳದು ವೇಶ್ಯಾವೃತ್ತಿ. ಈ ವೃತ್ತಿಯ ಬಗ್ಗೆ ಸಮಾಜದಲ್ಲಿರುವ ದೃಷ್ಟಿಧೋರಣೆ ಎಂಥದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಭೋಗದ ವಸ್ತುವಾಗಿ ಕಾಣುವ ಬಳಸುವ ಸ್ಥಿತಿ ಇಂದು ನಿನ್ನೆಯದಲ್ಲ ಧರ್ಮದ ಆವರಣದಲ್ಲೂ ಹೆಣ್ಣನ್ನು ಭೋಗದ ಸರಕಾಗಿ ಬಳಸಿದ್ದು ಅಲ್ಲಿ ಕಾಮದ ಜೊತೆಗೆ ಕಲೆಯನ್ನು ಸಂಗತಗೊಳಿಸಿ ಅದಕ್ಕೆ ಧಾರ್ಮಿಕ ವಿಧಿವಿಧಾನಗಳ ಒಪ್ಪಿತ ಮುದ್ರೆ ನೀಡಿದ್ದು ಅದನ್ನೊಂದು ವ್ಯವಸ್ಥೆಯಾಗಿ ಬೆಳೆಸಿದ್ದು ಆನಂತರದಲ್ಲಿ ಅದೇ ವೇಶ್ಯಾವೃತ್ತಿಯಾಗಿ ಸಮಾಜದಲ್ಲಿ ಮುಂದುವರಿದಿದ್ದು ಇದೆಲ್ಲಾ ಚರಿತ್ರೆಯಲ್ಲಿ ಆಗುತ್ತಾ ಬೆಳೆದ ದುರಂತದ ಸಂಗತಿ. ಕಡೆಗಣಿತವಾದ ಅಪಮಾನಿತ ಜಾತಿಯಾಗಿಯೂ ಶಿವಶರಣೆಯಾದ್ದರಿಂದ ಅವಳು ತನ್ನ ವೃತ್ತಿಯನ್ನು ಕಾಯಕಪ್ರಜ್ಞೆಯಲ್ಲಿ ಸ್ವೀಕರಿಸಿದ್ದಾಳೆ.

ಬಸವಣ್ಣನವರ ಪತ್ನಿ ಶಿವಶರಣೆ ಗಂಗಾಂಬಿಕೆ ಬಹಳ ಸೌಮ್ಯ ಸ್ವಭಾವದವಳು ಪತಿಯಾಜ್ಞಾ ಧಾರಕಳು. ಹೆಚ್ಚು ಜಂಜಾಟಗಳಲ್ಲಿ ತೊಡಗಿಸಿಕೊಂಡವಳಲ್ಲ. ಪತಿಯನುಸರಣೆಯಲ್ಲಿಯೇ ನೆಮ್ಮದಿಯನ್ನು ಕಂಡಳು. ಮಹಾಮನೆಯಲ್ಲಿ ದಾಸೋಹ ಕಾರ್ಯವನ್ನು ನಿಭಾಯಿಸಬೇಕು ಎಂದು ಆಜ್ಞೆಯಾದರೆ ಅದರಲ್ಲಿಯೇ ಸಂತೃಪ್ತಳು. ಅನುಭವ ಮಂಟಪದ ಗೋಷ್ಠಿಯಲ್ಲಿ ಭಾಗವಹಿಸಬಹುದು ಎಂದು ತಿಳಿದಾಗಲೇ ಅ ಕಡೆ ಅಭಿರುಚಿ ತೋರುವವಳು. ಒಟ್ಟಿನಲ್ಲಿ ಪತಿಗೆ ಅನುಕೂಲೆಯಾಗಿ ಹೋಗಬೇಕೆಂಬುದೇ ಗಂಗಾಂಬಿಕೆಯರ ಜೀವನ ಧ್ಯೇಯ. ಬಸವಣ್ಣನವರು ಕೂಡಲಸಂಗಮಕ್ಕೆ ಬರಬೇಕೆಂದು ಹೇಳಿ ಕಳುಹಿಸಿದಾಗ ಗಂಗಾಂಬಿಕೆ ನೀಡುವ ಪ್ರತಿಕ್ರಿಯೆ ಹೀಗಿದೆ.

*ನಾನಾರ ಸಾರುವುನೆಂದು ಚಿಂತಿಸಲೇಕಯ್ಯ ಬಸವಾ?*
*ನಾನಾರ ಹೊಂದುವೆನೆಂದು ಭ್ರಮೆ ಬರಲೇತಕಯ್ಯ ಬಸವಾ?*
*ನಾನಾರ ಇರವನರಿವೆನೆಂದು ಪ್ರಲಾಪಿಸಲೇತಕಯ್ಯ ಬಸವಾ?*
*ಪರಿಣಾಮ ಮೂರ್ತಿ ಬಸವನ ರೂಪು ಎನ್ನಕರಸ್ಥಲದಲ್ಲಿ ಬೆಳಗಿದ ಬಳಿಕ*
*ಸಂಗಯ್ಯನ ಹಂಗು ನಮಗೇತಕ್ಕಯ್ಯ ಬಸವಾ?*

ಈ ವಚನದಲ್ಲಿ ದಾಂಪತ್ಯ ಸಂಬಂಧದ ಪ್ರಾವಿತ್ಯೆಯನ್ನು ಕುರಿತು ಹೇಳುತ್ತಾರೆ. ಪತ್ನಿಗೆ ಪತಿಯಾಜ್ಞೆಯನ್ನು ಪಾಲಿಸುವುದೇ ಪ್ರತಿಜ್ಞೆಯಾಗಿರಬೇಕು ಹೆಣ್ಣಿಗೆ ಬೇರೆ ಬೇರೆ ಪ್ರತಿಜ್ಞೆಯಿದ್ದರೆ, ಬೇರೆ ಬೇರೆ ವ್ರತಗಳಿದ್ದರೆ ಅವು ಪತಿಯ ಪ್ರತಿಜ್ಞೆಗಳಿಂದ ಘರ್ಷಿಸುತ್ತಿದ್ದರೆ ಅಂಥ ಪ್ರತಿಜ್ಞೆಯನ್ನು ಪತಿಕರಿಸುವುದು ಯಾತನೆಯ ವಿಷಯ ಗಂಡ ಶಿವಲಿಂಗ ದೇವರ ಭಕ್ತನಾಗಿ ಹೆಂಡತಿ ಮಾರಿ ಮಸಣೆಯ ಭಕ್ತೆಯಾದರೆ ಭಾಂಡ ಭಾಜನಶುದ್ಧವಿಲ್ಲವನೆಂದು ಬಸವಣ್ಣ ಹೇಳಿದ ಹಾಗೆ ಪತ್ನಿಯಾದವಳು ಬದುಕಬೇಕೆಂದು ಗಂಗಾಂಬಿಕೆಯ ನಿಲುವು ಲಿಂಗನಿಷ್ಠೆ ಪ್ರತಿಜ್ಞೆ ಪತ್ನಿಯದ್ದಾದರೆ ಮಾತ್ರ ಒಳ್ಳೆಯ ದಾಂಪತ್ಯ ಬದುಕು

ಬದುಕಲು ಸಾಧ್ಯವಾಗುತ್ತದೆ. ಹೆಂಡತಿ ಗಂಡನೊಡನೆ ಅಥವಾ ಗಂಡ–ಹೆಂಡತಿಯೊಡನೆ ವಿಚಾರಧಾರೆಯನ್ನು ಮೇಳೈಸಿಕೊಂಡು ಹೋಗಬೇಕು. ಪರಸ್ಪರರು ವಿರುದ್ಧ ಈಸಿದರೆ ಸಂಸಾರ ಸರಿ ಇರುವುದಿಲ್ಲ. ಪತಿಯಾಜ್ಞೆ ಪಾಲನೆಯ ಪ್ರತಿಜ್ಞೆಯೇ ಎಲ್ಲ ಪ್ರತಿಜ್ಞೆಗಳಿಗಿಂತ ಶ್ರೇಷ್ಠವಾದದ್ದು. "ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದರೇನೋ ಶಿವಶಿವಾ ಹೋದರೇನೋ ಶಿವಶಿವಾ ಎಂಬ ಗಟ್ಟಿಯಾದ ಮನೋಸ್ಥಿತಿಯನ್ನು ಹೊಂದಿರುವ ಗಂಗಾಂಬಿಕೆ ಪತಿಯ ಸೇವೆಯಲ್ಲೇ ತನ್ನ ಬದುಕಿನ ಸಾರ್ಥಕ್ಯವನ್ನು ಕಂಡಕೊಂಡವಳು.

ಮತ್ತೊಬ್ಬ ವಚನಕಾರ್ತಿ ಗಂಗಮ್ಮ. ಇವಳು ಹಾದರ ಕಾಯಕದವಳು. ಗಂಗೇಶ್ವರ (ಲಿಂಗ) ಅಂಕಿತದಲ್ಲಿ ವಚನ ರಚಿಸಿರುವ ಗಂಗಮ್ಮ ಮಾರಯ್ಯನ ಸತಿ. ಸತ್ಯಶುದ್ಧ ಕಾಯಕ ಶ್ರದ್ಧೆಯನ್ನು, ಆಚಾರ ಶುದ್ಧಿಯನ್ನು ಎತ್ತಿ ಹಿಡಿದಿರುವ ಈ ಆಕೆಯ ಒಂದು ವಚನವು ಹೀಗಿದೆ.

***ಆವ ಕಾಯಕವ ಮಾಡಿದರೂ ಒಂದೇ ಕಾಯಕವಯ್ಯ***
***ಆವ ವ್ರತವಾದಡೂ ಒಂದೆ ವ್ರತವಯ್ಯಾ***
***ಆಯತಪ್ಪಿದಡೆ ಸಾವಿಲ್ಲ, ವ್ರತ ತಪ್ಪಿದಡೆ ಕೂಡಲಿಲ್ಲ.***
***ಕಾಕ ಪಿಕದಂತೆ ಕೂಡಲು ನಾಯಕ ನರಕ***
***ಗಂಗೇಶ್ವರ ಲಿಂಗದಲ್ಲಿ.***

ಈಕೆಯ ಪ್ರಕಾರ ಶರಣರು ಯಾವ ಕಾಯಕ ಕೈಗೊಳ್ಳುತ್ತಾರೆ ಎಂಬುದಕ್ಕಿಂತ ಯಾವುದಾದರೂ ಒಂದು ಕಾಯಕದಲ್ಲಿ ಶ್ರದ್ಧೆಯಿಂದ ತೊಡಗುವುದು ಮುಖ್ಯ. ಶರಣರ ಘನತೆಯನ್ನು ಅವರ ಕಾಯಕದ ಸ್ಥಾನಮಾನದ ಅಳತೆ ಗೋಲಿನಿಂದ ನಿರ್ಧರಿಸುವುದು ಸಾಧ್ಯವಿಲ್ಲ. ಶರಣರು ಶ್ರದ್ಧೆಯಿಂದ ಶುದ್ಧ ಮನಸ್ಸಿನಲ್ಲಿ ಕಾಯಕ ಮಾಡುತ್ತಿದ್ದಾರೊ ಇಲ್ಲವೋ, ಎಂಬುದೇ ನಿಜವಾದ ಅಳತೆಗೋಲು. ಪ್ರತಿಯೊಂದು ಕಾಯಕವೂ ದೊಡ್ಡದು. ಆಧ್ಯಾತ್ಮಿಕತೆ ಹಾಗೂ ದೈವ ಸಾಕ್ಷಾತ್ಕಾರಕ್ಕೆ ಕಾಯಕದಲ್ಲಿನ ನಿಷ್ಠೆ ಹಾಗೂ ಈ ಶುದ್ಧಭಾವನೆ ಮುಖ್ಯವೇ ವಿನಃ ಅದರಿಂದ ಗಳಿಸಿದ ಸಂಪತ್ತಲ್ಲ. ಪ್ರತಿಫಲಾಪೇಕ್ಷೆ ಬಯಸದೆ ಸಲ್ಲಿಸಿದ ಕಾಯಕದಿಂದ ಮಾತ್ರ ಬಿಡುಗಡೆ ಸಾಧ್ಯ ಎಂಬ ನಂಬಿಕೆಯಿಂದ ತನ್ನ ಕಾಯಕವನ್ನ ನಿಷ್ಠೆಯಿಂದ ಮಾಡಿದವಳು.

**ಉಪಸಂಹಾರ**

ಹೀಗೆ ಶಿವಶರಣೆಯರು ತಮ್ಮ ಕಾಯಕವನ್ನು ತಮ್ಮ ಅಂತರಂಗದ ಶೋಧನೆ ಮತ್ತು ಅನುಭವದ ಅಭಿವ್ಯಕ್ತಿಗೆ ಸಾಧನವಾಗಿಸಿಕೊಂಡಿದ್ದರು. ಯಾವ ಕಾಯಕವಾದರೇನು ಕಾಯಕದಲ್ಲಿ ನಿರತರಾದವರಿಗೂ ದೈವ ಸಾಕ್ಷಾತ್ಕಾರ ಸಾಧ್ಯ ಎಂಬ ನಂಬಿಕೆ ಕಾಯಕ ಜೀವಿಗಳಾದ ಶರಣೆಯರದು. ಶ್ರಮದ ಘನತೆ, ಆತ್ಮಗೌರವದಂತಹ ವಿಚಾರಗಳು ಇಂಥ ಶರಣೆಯರನ್ನು ಸ್ವಾವಲಂಬಿಯನ್ನಾಗಿ ಬೆಳೆಸಿದವು. ವ್ರತಭ್ರಷ್ಟತನದ ಖಂಡನೆ ಮತ್ತು ವ್ರತ ನಿಷ್ಠೆಯ ಪ್ರತಿಪಾದನೆ ಇವರ ಪ್ರಮುಖ ಕಾಳಜಿಯಾಗಿತ್ತು. ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದ ಕೆಳವರ್ಗದಿಂದ ಬಂದ ವಚನಕಾರ್ತಿಯರು ಅಂದಿನ ಸಮಾಜದ ಸಮಕಾಲೀನ ಸಮಸ್ಯೆಗಳಾದ ಮೂಢನಂಬಿಕೆ, ಅಂಧಶ್ರದ್ಧೆ ಹಾಗೂ ಜಾತಿವ್ಯವಸ್ಥೆಯನ್ನು ತಿರಸ್ಕರಿಸುತ್ತಾ ತಮ್ಮ ಸಂವೇದನೆಗಳನ್ನು ಕಾಯಕ ನಿಷ್ಠೆಯನ್ನು ಪ್ರಾಮಾಣಿಕವಾಗಿ ತನ್ನ ವಚನಗಳಲ್ಲಿ ದಾಖಲಿಸಿದ್ದಾರೆ. ಹೀಗಾಗಿ ಈ ಸಾಹಿತ್ಯ ಇಡೀ ಚರಿತ್ರೆಯಲ್ಲೇ ಒಂದು ವಿಶಿಷ್ಟದಾಖಲೆಯನ್ನು ನಿರ್ಮಿಸಿದೆ.

**ಪರಾಮರ್ಶನ ಗ್ರಂಥಗಳು**

- ಚಿದಾನಂದ ಮೂರ್ತಿ. 2003). ವಚನ ಸಾಹಿತ್ಯ. ಸಪ್ನ ಬುಕ್ ಹೌಸ್, ಬೆಂಗಳೂರು.
- ನಾಗಭೂಷಣಸ್ವಾಮಿ ಒ.ಎಲ್. (2004). ವಚನ ಸಾವಿರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಪೋತೆ ಹೆಚ್.ಟಿ.(2013). ಶರಣ ಸಂಸ್ಕೃತಿ. ಸಪ್ನ ಬುಕ್ ಹೌಸ್, ಬೆಂಗಳೂರು.
- ಮಹೇಶ ತಿಪ್ಪಶೆಟ್ಟಿ. (2003). ಬಸವತತ್ವ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ಸಿದ್ಧರಾಮಯ್ಯ ಎಸ್.ಜಿ. (2013). ವಚನ ಸಂಸ್ಕೃತಿ ಸಾಹಿತ್ಯ ಸಂಗತಿ. ಸಪ್ನ ಬುಕ್ ಹೌಸ್, ಬೆಂಗಳೂರು.